ಲಭ್ಯವಿಲ್ಲ. ಬೆಂಗಳೂರಿನಲ್ಲಿ ಕಲಿಯುತ್ತ ನೃತ್ಯಾಭ್ಯಾಸ ಮಾಡುತ್ತಿದ್ದ ಹದಿಹರೆಯದ ಯುವತಿಯನ್ನು ಕನ್ನಡ ಚಿತ್ರವೊಂದರಲ್ಲಿ ನಾಯಕಿಯನ್ನಾಗಿ ಮಾಡಬೇಕೆಂದು ಮೊದಲು ಯೋಚಿಸಿದವರು ಸತ್ಯನಾರಾಯಣ್, ಹಿರಿಯ ಚಿತ್ರನಿರ್ದೇಶಕ–ನಿರ್ಮಾಪಕ ಆರ್. ನಾಗೇಂದ್ರರಾವ್ ಆ ಚಿತ್ರ ಸಂಸ್ಥೆಯಲ್ಲಿ ಮ್ಯಾನೇಜರ್ ಆಗಿದ್ದ ಸತ್ಯನಾರಾಯಣ್ (ಖ್ಯಾತ ನಟಿ ಸೌಂದರ್ಯ ಅವರ ತಂದೆ) ತಯಾರಿಸಿದ 'ನನ್ನ ಕರ್ತವ್ಯ' ಚಿತ್ರದಲ್ಲಿ ಕಲ್ಯಾಣ್ ಕುಮಾರ್‌ಗೆ ಎದುರಾಗಿ ಬಣ್ಣ ಹಚ್ಚಿದರು ಜಯಲಲಿತಾ.

ತೆಲುಗಿನ ಪ್ರಖ್ಯಾತ ಚಿತ್ರ ನಿರ್ದೇಶಕ ವೇದಾಂತಂ ರಾಘವಯ್ಯನವರು ನಿರ್ದೇಶಿಸಿದ ಈ ಚಿತ್ರಕ್ಕೆ ಸಂಭಾಷಣೆ ಬರೆದವರು ನಾಗೇಶ್ ಬಾಬು. (ಪ್ರಗತಿ ಸ್ಟುಡಿಯೊ) ಹಣಕಾಸು ಮುಗ್ಗಟ್ಟಿನಿಂದಾಗಿ ಚಿತ್ರ ತೆರೆ ಕಾಣುವುದು ತಡವಾಯಿತು. ಅದೇ ಸಮಯದಲ್ಲಿ ಬಿ.ಆರ್. ಪಂತಲು 'ಚಿನ್ನದ ಗೊಂಬೆ' ಚಿತ್ರಕ್ಕಾಗಿ ಜಯಲಲಿತಾರನ್ನು ನಾಯಕಿಯನ್ನಾಗಿ ಆಯ್ಕೆ ಮಾಡಿಕೊಂಡಿದ್ದು, ಕಲ್ಯಾಣ್ ಕುಮಾರ್ ನಾಯಕರಾಗಿದ್ದ 'ಚಿನ್ನದ ಗೊಂಬೆ' ಮೊದಲ ಚಿತ್ರವಾಗಿ ತೆರೆಕಂಡು ಯಶಸ್ವಿಯಾಗಿದ್ದು ಈಗ ಇತಿಹಾಸದ ಭಾಗ. ವಿದ್ಯಾಭ್ಯಾಸ– ನೃತ್ಯ ತಾಲೀಮು– ರಜಾ ದಿನಗಳಲ್ಲಿ ಚಿತ್ರೀಕರಣವನ್ನು ಹೊಂದಿಸಿಕೊಳ್ಳುತ್ತಿದ್ದ ಜಯಲಲಿತಾ ಆಗ ದಕ್ಷಿಣ ಚಲನಚಿತ್ರ ರಾಜಧಾನಿ ಮದ್ರಾಸ್‌ಗೆ ಸ್ಥಳಾಂತರವಾದರು. ಅಲ್ಲಿಯೇ ಓದು ಮುಂದುವರೆಯಿತು; ಜೊತೆಗೆ ಚಿತ್ರನಟನೆಯೂ.








ನುರಿತ ತಂತ್ರಜ್ಞರೆನ್ನಿಸಿಕೊಂಡು, ಚಿತ್ರ ನಿರ್ಮಾಣದಲ್ಲೂ ಹೆಸರು ಮಾಡಿದ್ದ ಬಿ.ಎಸ್. ರಂಗಾ ಅವರು, ಕನ್ನಡದಲ್ಲಿ ಮೊದಲ ವರ್ಣಚಿತ್ರ 'ಅಮರಶಿಲ್ಪ ಜಕಣಾಚಾರಿ'ಯನ್ನು ತೆರೆಗಿತ್ತರು. ಬಳ್ಳಿಯಂತೆ ಬಳುಕುವ ನರ್ತಕಿಯಾಗಿ ಜಯಲಲಿತಾ ಕಾಣಿಸಿಕೊಂಡ ಸಿನಿಮಾ ಇದು. ಚಿತ್ರದ ಟೈಟಲ್‌ನಲ್ಲೂ ನೃತ್ಯ– ಕುಮಾರಿ ಜಯಲಲಿತಾ ಎಂದೇ ಇದೆ.

ಬಹುಭಾಷಾ ಪ್ರವೀಣೆಯಾಗಿದ್ದ ಜಯಲಲಿತಾ ಭರತನಾಟ್ಯ, ಕೂಚುಪುಡಿ, ಮೋಹಿನಿ ಆಟ್ಟಂ ನೃತ್ಯಗಳಲ್ಲೂ ನಿಪುಣೆ. ಇದರೊಟ್ಟಿಗೆ ಸಂಗೀತದಲ್ಲೂ ಈಕೆಗೆ ಅಪಾರ ಆಸಕ್ತಿ. ಕರ್ನಾಟಕಿ– ಹಿಂದೂಸ್ತಾನಿ ಜೊತೆಗೆ ಪಾಶ್ಚಿಮಾತ್ಯ ಸಂಗೀತದಲ್ಲೂ ಒಲವು.

ಜಯಲಲಿತಾ ಅವರಿಗೆ ಮೊದ ಮೊದಲಿಗೆ ಬೇಡಿಕೆ ಶುರುವಾಗಿದ್ದು ಅವರ ನೃತ್ಯ ಕಾರ್ಯಕ್ರಮಗಳಿಗೆ.

**(42ನೇ ಪುಟ ನೋಡಿ)**